ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SECONDARY EDUCATION EXAMINATION BOARD, 6th CROSS, MALLESWARAM, BANGALORE – 560 003**

# ರಾಜ್ಯ ಮಟ್ಟದ ಎಸ್.ಎಸ್.ಎಲ್.ಸಿ. ಪೂರ್ವಸಿದ್ಧತಾ ಪರೀಕ್ಷೆ, ಫೆಬ್ರವರಿ 2020

# STATE LEVEL SSLC PREPARATORY EXAMINATION, FEBRUARY 2020

ಸಂಕೇತ ಸಂಖ್ಯೆ : **85-K** | **Code No. : 85-K**

## ವಿಷಯ : ಸಮಾಜ ವಿಜ್ಞಾನ

## Subject : SOCIAL SCIENCE

(ಕನ್ನಡ ಭಾಷಾಂತರ / **Kannada Version**)

ದಿನಾಂಕ : 22. 02. 2020 ] [ Date : 22. 02. 2020

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 80 ] [ Max. Marks : 80

---

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** 8 × 1 = 8

1. ಮೊದಲನೆಯ ಆಂಗ್ಲೋ–ಮೈಸೂರು ಯುದ್ಧವು ಕೊನೆಗೊಳ್ಳಲು ಕಾರಣವಾದ ಒಪ್ಪಂದ

   (A) ಸಾಲ್ಬಾಯ್ ಒಪ್ಪಂದ

   (B) ಮದ್ರಾಸ್ ಒಪ್ಪಂದ

   (C) ಮಂಗಳೂರು ಒಪ್ಪಂದ

   (D) ಶ್ರೀರಂಗಪಟ್ಟಣ ಒಪ್ಪಂದ

2. ಇಟಲಿಯ ಸರ್ವಾಧಿಕಾರಿಯಾಗಿದ್ದವನು

(A) ಲೆನಿನ್

(B) ಸ್ಟ್ಯಾಲಿನ್

(C) ಹಿಟ್ಲರ್

(D) ಮುಸೋಲಿನಿ

3. ಪಂಚಶೀಲ ತತ್ವಗಳಿಗೆ ಸಹಿ ಹಾಕಿದ ಚೀನಾದ ಪ್ರಧಾನಮಂತ್ರಿ

(A) ಸನ್–ಯಾತ್–ಸೇನ್

(B) ಷಿಯಾಂಗ್–ಕೈ–ಷೇಕ್

(C) ಚೌ.ಎನ್. ಲಾಯ್

(D) ಮಾವೋ ತ್ಸೆತುಂಗ್

4. ಅಸಂಘಟಿತ ವಲಯದ ದುಡಿಮೆಗಾರ

(A) ಸೈನಿಕ

(B) ಬ್ಯಾಂಕ್ ಉದ್ಯೋಗಿ

(C) ವಕೀಲ

(D) ಬೀಡಿ ಕಾರ್ಮಿಕ

5. ಕೈಗಾ ಅಣುಸ್ಥಾವರ ವಿರೋಧಿ ಚಳುವಳಿ ನಡೆದ ರಾಜ್ಯ

(A) ಉತ್ತರ ಪ್ರದೇಶ

(B) ತಮಿಳುನಾಡು

(C) ಕರ್ನಾಟಕ

(D) ಗುಜರಾತ್

6. ಪೂರ್ವ ಕರಾವಳಿ ಮೈದಾನವು

(A) ಅಗಲವಾಗಿದೆ

(B) ಕಿರಿದಾಗಿದೆ

(C) ಕಡಿದಾಗಿದೆ

(D) ಶಿಲಾಮಯವಾಗಿದೆ

7. ಕೆಳಗಿನವುಗಳಲ್ಲಿ ಪರಿಮಾಣಾತ್ಮಕ ಸಾಲ ನಿಯಂತ್ರಣ ಕ್ರಮವು

(A) ಮಾರ್ಜಿನ್ ಪ್ರಮಾಣದ ಬದಲಾವಣೆಯಾಗಿದೆ

(B) ಬ್ಯಾಂಕ್ ದರವಾಗಿದೆ

(C) ನೈತಿಕ ಒತ್ತಡವಾಗಿದೆ

(D) ನೇರ ಕ್ರಮವಾಗಿದೆ

8. ವಿಶ್ವ ವ್ಯಾಪಾರ ಸಂಘಟನೆಯ ಕೇಂದ್ರ ಕಛೇರಿ ಇರುವುದು

(A) ರೋಮ್

(B) ಪ್ಯಾರಿಸ್

(C) ಜಿನೇವಾ

(D) ವಾಷಿಂಗ್ಟನ್

II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : $8 \times 1 = 8$

9. ಬ್ರಿಟಿಷರು ಕಿತ್ತೂರು ಚೆನ್ನಮ್ಮನನ್ನು ಬೈಲಹೊಂಗಲದಿಂದ ಕುಸುಗಲ್ಲಿನ ಸೆರೆಮನೆಗೆ ಏಕೆ ಸ್ಥಳಾಂತರಿಸಿದರು ?

10. ಹಿಟ್ಲರನು ಸೋಷಿಯಲಿಸ್ಟರು ಮತ್ತು ಕಮ್ಯುನಿಸ್ಟರನ್ನು ಹೇಗೆ ಹತ್ತಿಕ್ಕಿದನು ?

11. ಸಂಪೂರ್ಣ ನಿಶ್ಶಸ್ತ್ರೀಕರಣ ಸಾಧ್ಯವಿಲ್ಲ. ಏಕೆ ?

12. ಅಸಂಘಟಿತ ವಲಯದ ಕೆಲಸಗಾರರು ಏಕೆ ವಲಸೆ ಹೋಗುತ್ತಾರೆ ?

13. ಭಾರತವು ಉಷ್ಣವಲಯದ ಮಾನ್ಸೂನ್ ಮಾದರಿಯ ವಾಯುಗುಣವನ್ನು ಹೊಂದಿರಲು ಕಾರಣವೇನು ?

14. ಭಾರತದಲ್ಲಿ ಅತ್ಯಧಿಕ ಜನಸಂಖ್ಯೆಯುಳ್ಳ ರಾಜ್ಯ ಯಾವುದು ?

15. ರಾಷ್ಟ್ರೀಯ ವರಮಾನ ಎಂದರೇನು ?

16. ಗ್ರಾಹಕರ ರಕ್ಷಣೆಯ ಅಗತ್ಯವೇನು ?

III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ : $8 \times 2 = 16$

17. ಎರಡನೆಯ ಕಾರ್ನಾಟಿಕ್ ಯುದ್ಧವು ಬ್ರಿಟಿಷರಿಗೆ ಪ್ರತಿಷ್ಠೆಯನ್ನು ತಂದುಕೊಟ್ಟಿತು. ಸಮರ್ಥಿಸಿ.

18. 1947 ರ ದೇಶವಿಭಜನೆಯು ಹೊಸ ಸವಾಲುಗಳನ್ನು ಸೃಷ್ಟಿಸಿತು. ಹೇಗೆ ?

19. ವಿಶ್ವವನ್ನು ರೋಗಮುಕ್ತಗೊಳಿಸಲು ವಿಶ್ವ ಆರೋಗ್ಯ ಸಂಸ್ಥೆಯು ಹೇಗೆ ಪ್ರಯತ್ನಿಸುತ್ತಿದೆ ?

**ಅಥವಾ**

ನಿಶ್ಶಸ್ತ್ರೀಕರಣವು ಏಕೆ ಪ್ರಚಲಿತ ಜಗತ್ತಿನ ಅವಶ್ಯಕತೆಯಾಗಿದೆ ?

20. ಬಾಲ್ಯವಿವಾಹವು ಮಕ್ಕಳ ಸರ್ವತೋಮುಖ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಹೇಗೆ ?

**ಅಥವಾ**

ಡಿ. ದೇವರಾಜ ಅರಸುರವರು ಕರ್ನಾಟಕದಲ್ಲಿ ಸಾಮಾಜಿಕ ಪರಿವರ್ತನೆಗೆ ನಾಂದಿ ಹಾಡಿದರು. ಹೇಗೆ ?

21. ಕಪ್ಪು ಮಣ್ಣು ಹತ್ತಿ ಬೇಸಾಯಕ್ಕೆ ಹೆಚ್ಚು ಸೂಕ್ತವಾದುದು. ಸಮರ್ಥಿಸಿ.

22. ಈ ಕೆಳಗಿನ ನದಿಗಳನ್ನು ಪೂರ್ವಕ್ಕೆ ಹರಿಯುವ ಮತ್ತು ಪಶ್ಚಿಮಕ್ಕೆ ಹರಿಯುವ ನದಿಗಳಾಗಿ ವಿಂಗಡಿಸಿ :

ನರ್ಮದಾ, ಮಹಾನದಿ, ತಾಪಿ, ಗೋದಾವರಿ, ಕೃಷ್ಣ, ಶರಾವತಿ, ಸಬರಮತಿ, ಕಾವೇರಿ.

23. ಸಾರ್ವಜನಿಕ ವೆಚ್ಚದ ಉದ್ದೇಶಗಳಾವುವು ?

24. ನಾರಾಯಣಮೂರ್ತಿಯವರ ಬಗ್ಗೆ ಬರೆಯಿರಿ.

IV. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ :** $9 \times 3 = 27$

25. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳನ್ನು ತಿಳಿಸಿ.

**ಅಥವಾ**

ಆರ್ಯ ಸಮಾಜದ ಉದ್ದೇಶಗಳನ್ನು ತಿಳಿಸಿ.

26. ಬ್ರಿಟಿಷರ ಭೂಕಂದಾಯ ನೀತಿಯು ಭಾರತೀಯರನ್ನು ಸಂಪೂರ್ಣವಾಗಿ ಶೋಷಿಸಿತು. ಹೇಗೆ ?

27. 1857 ರ ದಂಗೆಯ ರಾಜಕೀಯ ಮತ್ತು ಆಡಳಿತಾತ್ಮಕ ಕಾರಣಗಳಾವುವು ?

28. ಭಾರತವು ರಷ್ಯಾದೊಂದಿಗೆ ಸೌಹಾರ್ದಯುತ ಸಂಬಂಧವನ್ನು ಹೊಂದಿದೆ. ಉದಾಹರಿಸಿ.



[ Turn over

29. ಶಿಕ್ಷಣದಲ್ಲಿ ಸಮಾನತೆಗೆ ಅವಕಾಶ ಮಾಡಿಕೊಡುವ ನಮ್ಮ ಸಂವಿಧಾನದ ವಿಧಿಗಳನ್ನು ವಿವರಿಸಿ.

30. ರಸ್ತೆ ಸಾರಿಗೆಯು ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಸಮರ್ಥಿಸಿ.

31. ಕೈಗಾರಿಕೆಗಳ ಸ್ಥಾಪನೆಯಲ್ಲಿ ಯಾವ ಅಂಶಗಳು ಪ್ರಭಾವ ಬೀರುತ್ತವೆ ?

**ಅಥವಾ**

ಭಾರತದಲ್ಲಿ ಅರಣ್ಯಗಳ ಸಂರಕ್ಷಣೆಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

32. ಭಾರತವು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡಿರುವ ಗುಣಲಕ್ಷಣಗಳನ್ನು ವಿವರಿಸಿ.

**ಅಥವಾ**

ಬ್ಯಾಂಕುಗಳ ಮಹತ್ವವನ್ನು ವಿವರಿಸಿ.

33. ಬ್ಯಾಂಕುಗಳ ವಿಧಗಳಾವುವು ?

**ಅಥವಾ**

ಜಾಗತೀಕರಣದ ಅನುಕೂಲಗಳಾವುವು ?

V. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಉತ್ತರಿಸಿ :** $4 \times 4 = 16$

34. ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಮಂದಗಾಮಿಗಳ ಪಾತ್ರವನ್ನು ವಿವರಿಸಿ.

**ಅಥವಾ**

ಬ್ರಿಟಿಷರ ವಿರುದ್ಧದ ಪ್ರತಿಭಟನೆಯಲ್ಲಿ ಪುಟ್ಟ ಬಸಪ್ಪನ ಪಾತ್ರವನ್ನು ವಿವರಿಸಿ.

35. ಅಸಹಕಾರ ಚಳವಳಿಯ ಸಂದರ್ಭದಲ್ಲಿ ಉಂಟಾದ ಪ್ರಮುಖ ಬೆಳವಣಿಗೆಗಳನ್ನು ತಿಳಿಸಿ.

36. ಭ್ರಷ್ಟಾಚಾರವು ಸಮಾಜದ ಮೇಲೆ ಬೀರುವ ನಕಾರಾತ್ಮಕ ಪರಿಣಾಮಗಳನ್ನು ವಿವರಿಸಿ.

37. ಪ್ರವಾಹಕ್ಕೆ ಕಾರಣ ಮತ್ತು ಪರಿಣಾಮಗಳಾವುವು ?

VI. 38. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ : 1 + 4 = 5

a) ವಿಂಧ್ಯ ಶ್ರೇಣಿ

b) ಹಿರಾಕುಡ್ ಯೋಜನೆ

c) ವಿಶಾಖಪಟ್ಟಣ

d) ಇಂದಿರಾ ಕೋಲ್

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38 ರ ಬದಲಿಗೆ)***

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಪ್ರಮುಖ ಉದ್ದೇಶಗಳು ಯಾವುವು ? 5